IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಅರವು ಭಾಷಿಕ ಸಮುದಾಯದಲ್ಲಿ ಜಿಲ್ಜಿ ಪೂಜೆ

ಡಾ.ಹೇಮಲತಾ
ಮಾರ್ಗದರ್ಶಕರು
ಕನ್ನಡ ವಿಭಾಗ
ಜೈನ್ ವಿ ವಿ

ಸೌಮ್ಯ ಆರ್
ಸಂಶೋಧನಾರ್ಥಿ
ಉಪನ್ಯಾಸಕಿ
ಕನ್ನಡ ವಿಭಾಗ
ವಿವೇಕಾನಂದ ಪದವಿ ಪೂರ್ವ ಕಾಲೇಜು

ಮಾನವನು ಸಂಘಜೀವಿ. ಅವನು ಸದಾ ತನ್ನದೆ ಆದ ಸಮೂಹವನ್ನು ಹೊಂದಿರುತ್ತಾನೆ. ಅವರೊಡನೆ ಸಹಜೀವನವನ್ನು ನಡೆಸುತ್ತಾ ಸಹಭಾಗೀತ್ವದಿಂದ ಬದುಕನ್ನು ನಡೆಸುವನು. ಅವರೊಂದಿಗೆ ತನ್ನ ಅನಿಸಿಕೆ, ನೋವು–ನಲಿವು ಹೀಗೆ ತನ್ನೆಲ್ಲಾ ಭಾವನೆಯನ್ನು ಭಾಷೆಯ ಮೂಲಕ ಅಭಿವ್ಯಕ್ತಿಸುತ್ತಾನೆ. ಇದಕ್ಕಾಗಿ ಒಂದು ಸಮುದಾಯವೂ ಅವರಿಗೆ ತಿಳಿದಿರುವ ಅವರದೇ ಆದ ಪ್ರಾದೇಶಿಕ ಭಾಷೆಯನ್ನು ಹೊಂದಿರುತ್ತದೆ. ಮನುಷ್ಯನೊಡನೆ ಸೇತುವೆಯನ್ನು ಬೆಸೆಯುವ ಕೊಂಡಿಯೇ ಭಾಷೆ ಇದು ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಭಾಷೆ ಮತ್ತು ಸಂಸ್ಕೃತಿ ಒಂದಕ್ಕೊಂದು ಪೂರಕವಾದದ್ದು. ಒಂದು ಜನಾಂಗವೂ ಹೊಂದಿರುವ ಆಚಾರ–ವಿಚಾರ, ರೂಢಿ ಸಂಪ್ರದಾಯ, ನಂಬಿಕೆ ಎಲ್ಲವನ್ನೂ ಒಳಗೊಂಡ ಸಮಗ್ರವಾದ ಅಧ್ಯಯನವೇ ಸಂಸ್ಕೃತಿಯಾಗಿರುತ್ತದೆ. ಸಂಸ್ಕೃತಿಯನ್ನು ತಿಳಿಯಲು ಭಾಷೆ ಸಹಾಯಕವಾದದ್ದು. ಭಾಷೆಯಲ್ಲಿ ಬರಹಭಾಷೆ ಮತ್ತು ಮೌಖಿಕ ಭಾಷೆಗಳಿವೆ ನಮ್ಮ ದೇಶದಲ್ಲಿ ಲಿಪಿಯನ್ನು ಹೊಂದಿರುವ ಹಲವಾರು ಭಾಷೆಗಳಿವೆ. ಹಾಗೆಯೇ ಲಿಪಿಯನ್ನು ಹೊಂದಿರದ ಕೇವಲ ಮೌಖಿಕವಾಗಿ ಬಳಕೆಯಲ್ಲಿ ಇರುವಂತಹ ಬೆಳಾರಿಯಂತಹ ಹಲವು ಭಾಷೆ ಇರುವಂತೆ ಇಂದಿಗೂ ಬಳಕೆಯಿಂದ ಜೀವಾಂತವಿರುವ ಆಡುಭಾಷೆ "ಅರವು" ಭಾಷೆಯಾಗಿದೆ.

ಅರವು ಭಾಷೆ ಎಂಬುದು ಲಿಪಿಯನ್ನು ಹೊಂದಿರದ ಕೇವಲ ಜನರ ಬಳಕೆಯಿಂದ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡಿರುವ ಆಡು ಭಾಷೆಯಾಗಿದೆ. ಅರವು ಭಾಷೆ ಎಂಬುದು ಆನೇಕಲ್ ಹಾಗೂ ಬೆಂಗಳೂರು ಗ್ರಾಮಾಂತರದ ಸುತ್ತಮುತ್ತಲಿನ ಗಡಿಭಾಗಗಳಲ್ಲಿ ಇಂದಿಗೂ ಮಾತನಾಡುವ ಭಾಷೆಯಾಗಿದೆ. ಈ ಭಾಷೆಯ ವಿಶೇಷತೆ ಎಂದರೆ ಇದೊಂದು ದ್ವಿಭಾಷಿಕ ಮತ್ತು ಬಹುಭಾಷಿಕ ಮಿಶ್ರಣವಾಗಿರುವ ಭಾಷೆ ಇದು ತೆಲುಗು, ತಮಿಳು, ಕನ್ನಡ ಭಾಷೆಯ ಮಿಶ್ರಣದಿಂದ ಹೊಸ ಭಾಷೆಯಾಗಿಯೇ ಇರುವ ಭಾಷೆ ಅರವು. ಅರವು ಭಾಷೆಯನ್ನು ಮಾತನಾಡುವ. ಜನಾಂಗ ಅಥವಾ ಸಮುದಾಯವೆಂದರೆ

ತಿಗಳಾರಿಯರು, ಪರ್ರೈಯರು, ಹೊಲೆಯರು, ತಿಗಳ ಹೊಲೆಯರು ಎಂದು ಕರೆಯುತ್ತಾರೆ. ಹೊಲೆಯರ ಮಾತೃಭಾಷೆ ಅರವು ಎನ್ನುತ್ತಾರೆ. ಅರವು ಎಂದರೆ ಸಾಮಾನ್ಯವಾಗಿ ತಿಳಿವಳಿಕೆ. ಜ್ಞಾನವನ್ನು ಹೊಂದುವುದು, ಅರಿವು ಎಂದಾರ್ಥ. ಒಂದು ಭಾಷೆಯೂ ಹಲವಾರು ಕಾರಣಗಳಿಂದ ಕಾಲ ಕಾಲಕ್ಕೆ ಆಗುವ ಹೊಸತನದ ಸ್ವೀಕರಣ, ವಲಸೆಯಿಂದ, ಸಮುದಾಯಗಳ ಸಮ್ಮಿಲನದಿಂದ ಬದಲಾವಣೆ ಆಗುತ್ತದೆ. ಹಾಗೆಯೇ ಅರವು ಎಂಬುದಕ್ಕೆ ತಮಿಳು ಎಂದು, ತಮಿಳಿನ ಮೂಲದಿಂದ ಬಂದದೆಂದ ತಿಳಿಯಲಾಗಿದೆ. ಆದರೆ ಅರವು ಭಾಷೆಯ ಮೂಲ ಭಾಷಿಕರನ್ನು ಗುರುತಿಸುವುದು ಕಷ್ಟಸಾಧ್ಯವಾದದ್ದು ಇವರ ಸಂಸ್ಕೃತಿಯೂ ಮಹತ್ವವಾದದ್ದು. ಸಂಸ್ಕೃತಿಯು ಸಮಾಜವೊಂದರ ಸಂಪತ್ತು ಆಗಿದೆ. ಇದು ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವ ಗುಪ್ತನಿಧಿಯಾಗಿರುತ್ತದೆ. ಅರವು ಸಮುದಾಯವು ಹಬ್ಬಗಳನ್ನು, ಆಚರಣೆಗಳನ್ನು, ರೂಢಿ, ನಂಬಿಕೆಯನ್ನು ಹೊಂದಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಪೂಜೆ, ನಂಬಿಕೆ, ಆಚರಣೆ ಎಂದರೆ ಜಲ್ಜಿ ಪೂಜೆಯು ಸಹ ಒಂದು, ಅರವು ಭಾಷೆಯಲ್ಲಿ ಜಲ್ಜಿ ಪದಕ್ಕೆ ಕನ್ನಡದಲ್ಲಿ ಜಲ, ನೀರು ಎಂಬ ಅರ್ಥವಿದೆ.

ಅರವು ಸಮುದಾಯದಲ್ಲಿನ ಹಲವು ಆಚರಣೆಗಳಲ್ಲಿ ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿರುವ ಅಷ್ಟೇ ಶ್ರಧ್ಧಾ, ಭಕ್ತಿಯಿಂದ ನಡೆಸುವರು. ಜಲ್ಜಿ ಪೂಜೆಯನ್ನು ಗಂಗಾ ಪೂಜೆ, ಜಲಪೂಜೆ, ಜಲ್ದಿಪೂಜೆ, ಜಲಜಿ ಪೂಜೆ ಎಂದು ನಾನಾ ಹೆಸರಿನಿಂದ ಕರೆಯುತ್ತಾರೆ. ಇದರ ಮುಖ್ಯ ಉದ್ದೇಶ ಜಲದ ಪೂಜೆ ಮಾಡುವುದು. ಇದರ ಕಾರಣಗಳು ಜಲ್ಜಿಪೂಜೆಯನ್ನು ಮಾಡುವುದು

1. ಯಾವುದಾದರೂ ಅರವು ಸಮುದಾಯದ ಗ್ರಾಮದಲ್ಲಿ ಶಿಲೆಯಾಗಿ ನೆಲೆಗೊಂಡಿರುವ ಶ್ರೀ ರೇಣುಕಾಯಲ್ಲಮ್ಮ ದೇವಿಯವರಿಗೆ ಶಕ್ತಿ ತುಂಬಲು ಮಾಡುತ್ತಾರೆ.
2. ದೇವಾಲಯವಿದ್ದು ತುಂಬಾ ವರ್ಷಗಳಿಂದ ಆ ದೇವರಿಂದ ಗ್ರಾಮಕ್ಕೆ ಗ್ರಾಮಸ್ಥರಿಗೆ ಒಳಿತು ಆಗುತ್ತಿಲ್ಲ, ಯಾವ ಕೆಲಸವೂ ನೆರವೇರುತ್ತಿಲ್ಲ ಎಂದಾಗ ಈ ಪೂಜೆಯನ್ನು ಮಾಡುತ್ತಾರೆ.
3. ಗ್ರಾಮದಲ್ಲಿರುವ ದೇವಾಸ್ಥಾನದಲ್ಲಿ ಭಕ್ತಿ, ಪ್ರಶಾಂತತೆ, ನೆಮ್ಮದಿ ಈ ತರ ಭಾವನೆಗಳು ಬರಲಿಲ್ಲವೆಂಬ ಅನುಭಾವವಾದಾಗ ಅಲ್ಲಿ ದೈವಾಶಕ್ತಿಯ ಪ್ರಭಾವವಿಲ್ಲವೆಂದು ಈ ಪೂಜೆ ಮಾಡುತ್ತಾರೆ.
4. ದೇವಸ್ಥಾನಗಳಲ್ಲಿ ಸರಿಯಾಗಿ ಯಾವುದೇ ಪೂಜೆಗಳು ನಡೆಯುತ್ತಿಲ್ಲವೆಂದಾಗ ದೇವರಿಗೆ ಶಕ್ತಿಯನ್ನು ಹೆಚ್ಚಿಸಲು ಈ ಪೂಜೆಯನ್ನು ಮಾಡಿಸುತ್ತಾರೆ.
5. ಹೊಸದಾಗಿ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದಾಗ ಆಗ ವಿಗ್ರಹಕ್ಕೆ ದೇವರ ಶಕ್ತಿಯನ್ನು ತುಂಬಿಸಲು ಮುಖ್ಯವಾಗಿ ಈ ಜಲ್ಜಿ ಪೂಜೆಯನ್ನು ಮಾಡುತ್ತಾರೆ.

ಜಲ್ದಿ ಪೂಜೆಯನ್ನು ಮೂರು ವರ್ಷ, ಒಂದು ವರ್ಷಕ್ಕೊಮ್ಮೆ ದೇವರಿಗೆ ಶಕ್ತಿತುಂಬಲು ಮಾಡಿಸುತ್ತಾರೆ. ಈ ಪೂಜೆಯನ್ನು ಎರಡು ದಿನ ಮಾಡುತ್ತಾರೆ. ಮೊದಲ ದಿನದಲ್ಲಿ ಒಂಭತ್ತು ಜನ ಮುತ್ತೈದೆಯರು ಒಬ್ಬ ವೀರಗಾರರು ಅಥವಾ ಶಿಡಿರಣ್ಣಾ ಎಂದು ಕರೆಯುವ ವ್ಯಕ್ತಿ ಇರುತ್ತಾರೆ. ಬಸವಿಯರು ಅಥವಾ ಬಸಮ್ಮ ಎಂದು ಕರೆಯುವ ಜಲ್ದಿ ಹಾಡಿಸುವವರು ಇರುತ್ತಾರೆ. ಹುತ್ತದ ಪೂಜೆಯನ್ನು ಮಾಡುತ್ತಾರೆ. ದೇವರನ್ನು ಹೋರುವ ಶಿಡಿರಣ್ಣಾ ದೇವರನ್ನು ತೆಗೆದುಕೊಂಡು ಹೋಗಿ ನೀರಿನ ಬಳಿಯಿಟ್ಟು ಪೂಜೆ ಮಾಡಿ, ಹಾವು ಇರದ ಹಾಗೂ ಹುತ್ತದಲ್ಲಿ ತೂತು ಇರದ ಹುತ್ತಕ್ಕೆ ಪೂಜೆಯನ್ನು ಸಲ್ಲಿಸಿ ಮೂರು ಗುಡ್ಡೆಯಂತೆ ಹುತ್ತದ ಮಣ್ಣನ್ನು ತೆಗೆದುಕೊಂಡು ಬರುತ್ತಾರೆ. ಇದರ ಜೊತೆ ಭಕ್ತಿ, ಶ್ರದ್ಧೆಯಿಂದ ನಿಯಮ ಪಾಲಿಸುವ ಒಂಭತ್ತು ಜನ ಮುತ್ತೈದೆಯರು ಒಂಭತ್ತು ಬಿಂದಿಗೆ ಆ ನೀರಿನಲ್ಲಿ ಮುಳುಗಿಸಿ ಅಲ್ಲಿನ ನೀರನ್ನು ತೆಗೆದುಕೊಂಡು ಬರುವರು ಇದರೊಂದಿಗೆ ತಂಬಿಟ್ಟಿನಿಂದ ಮಾಡಿದ ದೀಪಗಳನ್ನು ತೆಗೆದು ಹೋಗುತ್ತಾರೆ. ಅಲ್ಲಿ ದೇವರಿಗೆ ಯಲ್ಲಮ್ಮ ದೇವರಿಗೆ ಬೇಕಾದ ವಸ್ತುಗಳನ್ನು ತೆಗೆದುಕೊಂಡು ಬರುವಾಗ ಅಲ್ಲಿರುವ ಮುತ್ತೈದೆಯರಿಗೆ ಬಸವಿಯರ ಮೈ ಮೇಲೆ ದೇವರು ಬರುತ್ತದೆಂಬ ನಂಬಿಕೆ ಹೊಂದಿರುತ್ತಾರೆ.

ಈ ಜಲ್ದಿ ಪೂಜೆ ಮಾಡಿಸುವ ಮನೆಯವರು ಕಡ್ಡಾಯವಾಗಿ ತಮ್ಮ ಕುಟುಂಬಕ್ಕೆ ಸಂಬಂಧ ಪಟ್ಟ ಪ್ರತಿಯೊಬ್ಬರು ಆಹ್ವಾನಿಸುವುದು ಕಡ್ಡಾಯವಾಗಿರುತ್ತದೆ. ದ್ವೇಷ, ಜಗಳ ಎನೇ ಇದ್ದರು ಕರಯಬೇಕು ಇಲ್ಲದಿದ್ದರೆ ಆ ಪೂಜೆ ಸಫಲವಾಗದು ಎಂಬ ಅಭಿಪ್ರಾಯ ಇವರದು. ನೀರನ್ನು ಹೋರುವ ಬಿಂದಿಗೆಯ ಮೇಲೆ ಬಣ್ಣವನ್ನು ಬಳಿದಿರುತ್ತಾರೆ. ಬಿಂದಿಗೆ ಹೋರುವವರು ಅರಿಶಿಣ ಬಣ್ಣದ ಸೀರೆಯನ್ನು ಉಡಬೇಕು ನೇಮ, ನಿಷ್ಠೆಯಿಂದ ಇರಬೇಕಾಗುತ್ತದೆ. ಈ ಪೂಜೆಯಲ್ಲಿದ್ದರು ಮಡಿ ಮೈಲಿಗೆಯನ್ನು ಪಾಲಿಸಬೇಕು ಸಾವುಗಳಿಗೆ ಒಂದು ವರ್ಷದವರೆಗೂ ಹೋಗಬಾರದು, ಇದಕ್ಕಾಗಿಯೆ ಮೊದಲ ಪೂಜೆಯಾದ ಹುತ್ತದ ಪೂಜೆಯನ್ನು ಮಾಡಿ ಮೂರು ಗುಡ್ಡೆ ತಂದಿದ್ದ ಹುತ್ತದ ಮಣ್ಣನ್ನು ಹಾಗೂ ಒಂಭತ್ತು ಬಿಂದಿಗೆ ನೀರನ್ನು ಮೂಲದೇವರ ಗರ್ಭಗುಡಿಗೆ ಹಾಕುತ್ತಾರೆ. ಅಲ್ಲಿ ಈ ಪೂಜೆ ಮಾಡುವವರ ಮನೆಯಲ್ಲಿ ಇದನ್ನು ಇಟ್ಟಿರುತ್ತಾರೆ. ಅವರ ಮನೆಯಲ್ಲಿ ಪೂಜೆಯನ್ನು ಮಾಡುತ್ತಾರೆ. ನಂತರ ಗ್ರಾಮದ ದೇವತೆಗಳಿಗೆ ಮನೆ ದೇವರು, ಗಂಡು ಮತ್ತು ಹೆಣ್ಣು ದೇವರುಗಳಿಗೆ ಪೂಜೆ ಮಾಡಿಸುತ್ತಾರೆ. ಅವರನ್ನು ದಾರಿ ಉದ್ದ ಸೀರೆಯನ್ನು ಹಾಸಿ ಅದರ ಮೇಲೆಯೇ ನಡೆದುಕೊಂಡು ಹೋಗುತ್ತಾರೆ. ನೆಲದ ಮೇಲೆ ನಡೆಯುವಂತಿಲ್ಲ ಇದೇ ರೀತಿಯಲ್ಲಿ ಇಡೀ ಗ್ರಾಮವನ್ನು ಪ್ರದಕ್ಷಿಣೆಯನ್ನು ಮಾಡುತ್ತಾರೆ. ಹುತ್ತದಿಂದ ತೆಗೆದುಕೊಂಡು ಬಂದಿದ್ದು ಮಣ್ಣನ್ನು ಹೊತ್ತುಕೊಂಡು ಬರಲು ಮೂರುಜನ ಮುತ್ತೈದೆಯರು ಇರುತ್ತಾರೆ. ಇದರಿಂದ ಮೂರು ಒಲೆಯನ್ನು ಮಾಡುತ್ತಾರೆ. ಇದರ ನಂತರ ನಲ್ತಂಗಮ್ಮನವರನ್ನು ಕರೆಸುತ್ತಾರೆ. ಇವರು ದೇವರ ಮುಂದೆ ನೃತ್ಯಮಾಡುತ್ತಾರೆ. ಇಡೀ ರಾತ್ರಿ ಈ ನೃತ್ಯ ಮತ್ತು ಪೂಜೆಗಳು ನಡೆಯುತ್ತವೆ. ಎರಡನೆಯ ದಿನದಂದು ಬೆಳಗ್ಗಿನ ಜಾವ ಎದ್ದು ಎಲ್ಲಾ ಗ್ರಾಮದ ದೇವರುಗಳಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಮತ್ತೆ ಶಾಸ್ತ್ರೋಕ್ತವಾದ ಸಮಯದಲ್ಲಿ ನೀರಿನ ಬಳಿಹೋಗಿ ಅಲ್ಲಿಗೆ ಶೀಡಿರಣ್ಣ ಅಥವಾ ಶೀಡಿರಪ್ಪರವರನ್ನು ನಡುಮೂಡಿಯಲ್ಲಿ ಹೋಗುತ್ತಾರೆ.ಮೊದಲ ಪೂಜೆ ಶ್ರೀ ಮುನೇಶ್ವರ ಸಾಮಿಗೆ ಮಾಡುತ್ತಾರೆ. ಕಾರಣ ಇವರು ಉಳಿದ ದೇವತೆಗಳಿಗೆ ಅಣ್ಣನೆಂದು ಹಿರಿಯರಿಗೆ ಪೂಜೆ ಸಲ್ಲಿಸಿ ನಂತರ ಹೆಣ್ಣು ದೇವತೆಯರಿಗೆ ಪೂಜೆ ಮಾಡುತ್ತಾರೆ. ಹೆಣ್ಣು ದೇವರಲ್ಲಿ ಮೊದಲ ಆಧ್ಯತೆಯ "ಯಲ್ಲಮ್ಮ"ನಿಗೆ ಇರುತ್ತದೆ. ನಂತರ ಶೀಡಿರಪ್ಪ ಯಲ್ಲಮ್ಮನನ್ನು ಎತ್ತಿರುವ ದೇವರನ್ನು ಪಂಚೆಯ ಮೇಲೆ ಕೂರಿಸುತ್ತಾರೆ. ಹುತ್ತದ ಪೂಜೆಮಾಡಿ ತೆಗೆದುಕೊಂಡು ಬಂದಿದ್ದ 9 ಬಿಂದಿಗೆ ನೀರನ್ನು ಮೂಲ

ದೇವರಿನ ಗರ್ಭಗುಡಿಯಲ್ಲಿ ಹೋಗಿ ಆ ನೀರಿನಿಂದ ಅಭಿಷೇಕ ಮಾಡಿ ವಿಧಿ-ವಿಧಾನದಂತೆ ಪೂಜೆಮಾಡುತ್ತಾರೆ ಇದನ್ನು ಅರಿವೆಗಳ ಸಮೇತ ಗಂಗೆ ಪೂಜೆಗೆ ಹೊರಡುವುದು ಎನ್ನುತ್ತಾರೆ. ಈ ಸಮಯದಲ್ಲಿ ದೀಪಗಳಿಂದ ಪೂಜೆ ಮಾಡಿ ನಂತರ ಕುರಿಯನ್ನು ಪೂಜೆಮಾಡಿ ಶ್ರದ್ಧೆಯಿಂದ ಇದ್ದರೆ ಕುರಿಯೂ ತಲೆ ಮಾತ್ರವಲ್ಲದೇ ಇಡೀ ದೇಹವನ್ನು ಒದರಿದಾಗ/ಅಲುಗಾಡಿಸಿದಾಗ ಮಾತ್ರ ಬಲಿಯನ್ನು ನೀಡಬೇಕು. ಈ ರೀತಿಯಿದ್ದರೆ ಮಾತ್ರ ಸಫಲವಾಗಿದೆ ಎಂದೂ ಕುರಿ ಒದರಿಲ್ಲವೆಂದಾಗ ದೇವರಿಗೆ ಇಷ್ಟವಾಗಿಲ್ಲವೆಂದು ಭಾವಿಸುತ್ತಾರೆ. ಆಗ ಬೇರೆ ಕುರಿಯನ್ನು ಬಲಿಗೆ ನೀಡಬೇಕು. ಕುರಿಯ/ಕೋಳಿಯ ಬಲಿಯ ನಂತರ ಮತ್ತೆ ಮೂಲ ದೇವರ ಪೂಜೆಗಾಗಿ ಏಳು ತರದ ಹೂವಿನೊಂದಿಗೆ ಹೊರಡುತ್ತಾರೆ. ಇವರೆಲ್ಲರೂ ನೆಲದಲ್ಲಿ ಸೀರೆಹಾಸಿ ಆದರ ಮೇಲೆಯೇ ಶೀಡಿರಪ್ಪ ಮತ್ತು ಬಸವಿಯರು/ಬಸಮ್ಮ/ನಾಗವೇಣಿಯರು ಎನ್ನುವವರನ್ನು ಕರೆದುಕೊಂಡು ಹೋಗಿ ಇವರೇ ದೇವರುಗಳ ಪೂಜೆಯನ್ನು ಮಾಡಬೇಕು. ಈ ನಡುವೆ ಚಾಟಿ ಬೀಸಿಕೊಳ್ಳುವ ವ್ಯಕ್ತಿಯೂ, ಮೇಳದ ಸಮೇತ ಇರುತ್ತಾರೆ. ಇವರೆಲ್ಲಾ ರಾಜಬೀದಿಯಲ್ಲಿ ಅಥವಾ ಗ್ರಾಮದ ದೇವಾಲಯದ ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು ಹೋಗುತ್ತಾರೆ. ನಂತರದ ಪೂಜೆ ಹತ್ತಿಮರದ ಪೂಜೆ ಮಾಡುತ್ತಾರೆ. ಹತ್ತಿಮರದ ಸುತ್ತ ಸ್ವಚ್ಚಗೊಳಿಸಿ ಸ್ವಲ್ಪದೂರ ಆವರಣವಾಗಿ ಮಾಡುತ್ತಾರೆ. ಆ ಜಾಗದಲ್ಲಿ ಹುತ್ತದಿಂದ ಮಣ್ಣುತಂದು, ಮಡಿಕೆ ಮಾಡಿದ್ದ ಆ ಮೂರು ಮಡಕೆಯನ್ನು ತೆಗೆದುಕೊಂಡು ಬಂದು ಆ ಹತ್ತಿಮರದ ಪೂಜೆ ಮಾಡುವ ಜಾಗದಲ್ಲಿ ಇರಿಸುತ್ತಾರೆ. ಅಲ್ಲಿಗೆ ಭಕ್ತರು ಗ್ರಾಮದವರು ಇತರೆ ಆಹ್ವಾನಿತರು ಸೇರಿರುತ್ತಾರೆ. ಆಗಲು ಮತ್ತೆ ಕುರಿ ಬಲಿಯನ್ನು ನೀಡುತ್ತಾರೆ. ಈ ಬಲಿಯನ್ನು ನೀಡುವುದಕ್ಕೆ 'ಹಾರ' ಎನ್ನುತ್ತಾರೆ. ಈ ಸಮಯದಲ್ಲಿ ಎಲ್ಲಾ ಕುಟುಂಬ ವರ್ಗದವರು ಉಪಸ್ಥಿತರಿರಬೇಕು. ನಂತರ ಹುತ್ತದ ಮಣ್ಣಿನ ಮೂರು ಓಲೆಯಲ್ಲಿ ಅದರ ಮೇಲೆ ದೊಡ್ಡ ಪಾತ್ರೆಇಟ್ಟು, ಅಕ್ಕಿತೊಳೆದು ಅನ್ನ ಮಾಡುತ್ತಾರೆ. ಈ ಅನ್ನವನ್ನು ಹತ್ತಿಮರದ ಪೂಜೆ ಮಾಡಿದ ಸ್ಥಳದಲ್ಲಿ ಎಲೆಯಮೇಲೆ ಅನ್ನ ಹಾಕಿ ತಣ್ಣಗಾಗುವಂತೆ ಆರಿಸಲಾಗುತ್ತಾರೆ. ಇಲ್ಲಿ ಮತ್ತೆ ದೀಪಗಳನ್ನು ತೆಗೆದುಕೊಂಡು ಬರುತ್ತಾರೆ ಅದರಿಂದ ಪೂಜೆ ಮಾಡಿ ನಂತರ ಕುರಿ ಬಲಿನೀಡಿದಾಗ ಬರುವಂತಹ ರಕ್ತವನ್ನು ಅನ್ನಕ್ಕೆ ಹಾಕಿ ಮಿಶ್ರಮಾಡುತ್ತಾರೆ. ನಂತರ ಮೇಳದವರು, ಶೀಡಿರಪ್ಪ, ಬಸವಿಯವರೆಲ್ಲರೂ ದೈವ ಪರವಶರಾದವರಂತೆ ನೃತ್ಯ ಮಾಡುತ್ತಾರೆ. ಅವರಲ್ಲಿರುವವರ ಮೇಲೆ ದೈವ ಬರುವುದೆಂಬ ನಂಬುಗೆ ಇರುತ್ತದೆ. ಶೀಡಿರಪ್ಪ ನೃತ್ಯ ಮಾಡುವಾಗ ಹೆಜ್ಜೆಹೆಜ್ಜೆಗೂ ನಿಂಬೆಹಣ್ಣನ್ನು ತುಳಿಯುತ್ತಾರೆ. ನಂತರ ಮಿಶ್ರಣ ಮಾಡಿದ ರಕ್ತದ ಅನ್ನವನ್ನು ಸುತ್ತಲು ಚೆಲ್ಲುತ್ತಾರೆ ಆ ಅನ್ನಯಾರ ಮೇಲೂ ಬೀಳಬಾರದೆಂದು ಬಿದ್ದರೆ ತೊಂದರೆ ಸಂಭವಿಸುತ್ತವೆಂದು ನಂಬುಗೆ ಇರುತ್ತದೆ. ಇವೆಲ್ಲ ಸಂಗತಿಯಿಂದ ಶೀಡಿರಪ್ಪನ ಮೇಲೆ ದೈವ ಬರುವುದೆಂದು ಆದರಿಂದಲೇ ಹಸಿರಕ್ತದಿಂದ ಕೂಡಿದ ಅನ್ನವನ್ನು ತಿನ್ನುತ್ತಾರೆ. ಶೀಡಿರಪ್ಪ ಈ ರೀತಿ ಮಾಡುವುದಕ್ಕೆ "ಗಾವು ಹಿಡಿಯುವುದೆಂದು" ಕರೆಯುತ್ತಾರೆ. ಗಾವು ಹಿಡಿಯುವುದೆಂದರೆ ಆ ಗ್ರಾಮಕ್ಕೆ ಏನಾದರೂ ಸಮಸ್ಯೆಗಳು ಇದ್ದರೆ ತೊಲಗಬೇಕೆಂದು ಮಾಡುವುದು ಎನ್ನುತ್ತಾರೆ. ಇದರಿಂದ ದೇವರಿಗೆ ಶಕ್ತಿಯನ್ನು ನೀಡುವುದು ಎಂಬ ನಂಬಿಕೆ ಇರುತ್ತದೆ ಗಾವು ಹಿಡಿಯುವುದು ಆದ ನಂತರ ಕಡಿದ ಕುರಿಯಿಂದ ಅಡಿಗೆಯನ್ನು ಮಾಡಿ ಊಟಕ್ಕೆ ಹಾಕುತ್ತಾರೆ. ಅದೇ ಸಮಯದಲ್ಲಿ ಬಂದಂತಹ ಶೀಡಿರಪ್ಪ, ಬಸವಿಯರು, ಒಂಭತ್ತು ಜನ ಮುತ್ತೈದರಿಗೆ, ಹುತ್ತದ ಮಣ್ಣು ಹೊತ್ತಿದ್ದ ಸ್ತ್ರೀಯರನ್ನು ಕೂರಿಸಿ ಇವರಿಗೆ ಅಕ್ಕಿ, ಕೊಬ್ಬರಿ ಬಟ್ಟಲು, ಬೆಲ್ಲ, ಬಳೆ, ಎಲೆ-ಅಡಿಕೆ, ಮಡಿಲು ತುಂಬುತ್ತಾರೆ. ಮತ್ತೆ ದೇವರಿಗೆ ಮತ್ತೊಮ್ಮೆ ಪೂಜೆ ಮಾಡುತ್ತಾರೆ. ನಂತರ ದೇವರಿಗೆ ಶಕ್ತಿ ತುಂಬಿದೆ ಎಂದು ಗ್ರಾಮಗಳಲ್ಲಿ ಮೆರವಣಿಗೆ ಮಾಡಿದ ದೇವರನ್ನು ಗುಡಿಗೆ ಕರೆದುಕೊಂಡು ಹೋಗಿ ಪ್ರತಿಷ್ಠಾಪಿಸುತ್ತಾರೆ ಶಕ್ತಿ ಶಾಲಿಯಾದ ದೈವವಾಗಿದೆ ಎಂಬ ನಂಬುಗೆ ಇರುತ್ತದೆ.

ವಕ್ತೃಗಳ ಮಾಹಿತಿ

ಸಾಕಮ್ಮ – ಬಸಾಪುರ ಗೃಹಿಣಿ–ವಯಸ್ಸು – 58ವರ್ಷ

ರತ್ನಮ್ಮ – ಸೊಪ್ಪಹಳ್ಳಿ ಗೃಹಿಣಿ–ವಯಸ್ಸು – 56 ವರ್ಷ